


‘ರಾಮ ಹದಿನಾಲ್ಕು ವರ್ಷ ವನವಾಸ ಅನುಭವಿಸಬೇಕಾಯಿತು. ನಾವು ಕನಿಷ್ಠ ಹದಿನಾಲ್ಕರಿಂದ ಹದಿನೆಂಟು ತಿಂಗಳು ಕಾಡಿಗೆ ಹೋಗುವ ಪರಿಸ್ಥಿತಿಯಿದೆ.’

ಕೊರೊನಾ ನಂತರದಲ್ಲಿ ಕನ್ನಡ ಕಿರುತೆರೆಯ ಪರಿಸ್ಥಿತಿ ಹೇಗಿರಬಹುದು ಎನ್ನುವ ಪ್ರಶ್ನೆಗೆ ನಿರ್ಮಾಪಕ–ನಿರ್ದೇಶಕ ಬಿ. ಸುರೇಶ್ ರೂಪಕಾತ್ಮಕವಾಗಿ ಹೇಳಿದ ಮಾತಿದು. ಇದನ್ನೊಂದು ರೂಪಕದ ಮಾತು ಎಂದು ನಕ್ಕು ಸುಮ್ಮನಾಗುವಂತಿಲ್ಲ. ಕರ್ನಾಟಕದ ಬಹುತೇಕ ಮನೆಮಂದಿಯ ದೈನಿಕದ ಭಾಗವೇ ಆಗಿರುವ ಕಿರುತೆರೆ ಧಾರಾವಾಹಿಗಳಿಗೆ ಸಂಬಂಧಿಸಿದ ಯಾರನ್ನು ಮಾತನಾಡಿಸಿದರೂ ನಾಡಿನ ಸಂತೋಷದ ಮಾತುಗಳನ್ನಾಡುವುದರ ಬದಲಿಗೆ, ಕಾಡಿನ ವೈರಾಗ್ಯದ ಮಾತುಗಳೇ ಎದುರಾಗುತ್ತವೆ.

ಕೊರೊನಾ ನಂತರದ ಕನ್ನಡ ಕಿರುತೆರೆ ಹೇಗಿರುತ್ತದೆ ಎನ್ನುವ ಅವಲೋಕನಕ್ಕೆ ಮುಂದಾದ ‘ಸುಧಾ’ ಬಳಗದ ಮುಂದಿದ್ದುದು ಐದು ಪ್ರಶ್ನೆಗಳು. ಅವುಗಳೆಂದರೆ:

- ಸಮಾಜದ ಎಲ್ಲ ಕ್ಷೇತ್ರಗಳನ್ನೂ ಬಾಧಿಸುತ್ತಿರುವ ಆರ್ಥಿಕ ಸಂಕಷ್ಟ ಕಿರುತೆರೆ ಕ್ಷೇತ್ರದ ಮೇಲೆ ಬೀರಿರುವ ಪರಿಣಾಮ ಎಂತಹದ್ದು?
- ಕೊರೊನಾ ಕಾರಣದಿಂದಾಗಿ ಹೇರಲಾದ ಲಾಕ್‌ಡೌನ್ ಕಾರಣದಿಂದಾಗಿ ಧಾರಾವಾಹಿಗಳ ಪ್ರಸಾರಗಳು ಸ್ಥಗಿತಗೊಂಡವಲ್ಲ; ಆ ಧಾರಾವಾಹಿಗಳು ಈಗ ಮತ್ತೆ ಮುಂದುವರಿದಾಗ ಪ್ರೇಕ್ಷಕರು ಎಂದಿನಂತೆ ಅವುಗಳನ್ನು ನೋಡುತ್ತಾರೆಯೇ?
- ಧಾರಾವಾಹಿಗಳನ್ನು ನೋಡುವುದರಲ್ಲಿ ಹೆಣ್ಣುಮಕ್ಕಳ ಪ್ರಮಾಣ ಹೆಚ್ಚು. ಆ ಕಾರಣದಿಂದಾಗಿಯೇ ಧಾರಾವಾಹಿಗಳ ಕಥೆಗಳೆಲ್ಲ ಹೆಣ್ಣಿನ ಸುತ್ತಲೇ ಸುತ್ತುತ್ತವೆ. ಕೊರೊನಾ ಲಾಕ್‌ಡೌನ್ ಸಂದರ್ಭದಲ್ಲಿ ಗಂಡಸರು ಮನೆಯಲ್ಲಿದ್ದುದರಿಂದ, ಸಹಜವಾಗಿಯೇ ರಿಮೋಟ್ ಕೈ ಬದಲಾವಣೆ ಹೆಚ್ಚಾಗಿದೆ. ಕೊರೊನಾ ನಂತರದ ದಿನಗಳಲ್ಲೂ ಉಳಿದಿರುವ ‘ವರ್ಕ್‌ ಫ್ರಂ ಹೋಂ’ ದೆಸೆಯಿಂದಾಗಿ ಒಂದಷ್ಟು ಪುರುಷರು ಮನೆಗಳಲ್ಲಿಯೇ ಉಳಿಯಲಿದ್ದಾರೆ. ಉದ್ಯೋಗ ವಂಚಿತರು ಕೂಡ ಮನೆಯಲ್ಲಿಯೇ ಉಳಿಯಬೇಕಾಗುತ್ತದೆ. ಇದರಿಂದಾಗಿ, ಟೀವಿಯ ಮುಂದೆ ಗಂಡಸರೂ ಹೆಚ್ಚು ಸಮಯ ಕಳೆಯುವ ಪರಿಸ್ಥಿತಿ ಉದ್ಭವವಾಗಲಿದ್ದು, ಈವರೆಗಿನ ಸ್ತ್ರೀಕೇಂದ್ರಿತ ಕಥೆಗಳು ಬದಲಾಗಲಿವೆಯೇ? ಧಾರಾವಾಹಿಗಳ ನಿರ್ಮಾತೃಗಳು ತಮ್ಮ ಸಿದ್ಧಸೂತ್ರಗಳನ್ನು ಬದಲಿಸಿಕೊಳ್ಳುವ ಅನಿವಾರ್ಯತೆಯನ್ನು ಪ್ರಸಕ್ತ ಬಿಕ್ಕಟ್ಟು ಸೃಷ್ಟಿಸಲಿದೆಯೇ?
- ಲಾಕ್‌ಡೌನ್ ಸಂದರ್ಭದಲ್ಲಿ ‘ಅಮೆಜಾನ್ ಪ್ರೈಮ್’, ‘ನೆಟ್‌ಫ್ಲಿಕ್ಸ್’ಗಳಂತಹ ‘ಓಟಿಟಿ’ ವೇದಿಕೆಗಳ ಮೂಲಕ ಕನ್ನಡದ ಜೊತೆಗೆ ಪರಭಾಷೆಯ ಸಿನಿಮಾಗಳ ರುಚಿಯನ್ನೂ ಹತ್ತಿಸಿಕೊಂಡಿರುವ ಪ್ರೇಕ್ಷಕವರ್ಗವೊಂದು ಸಣ್ಣ ಪ್ರಮಾಣದಲ್ಲಿ ರೂಪುಗೊಂಡಿದೆ. ಈ ಪ್ರೇಕ್ಷಕರು ಬದಲಾದ ಸಂದರ್ಭದಲ್ಲಿ ಓಟಿಟಿ ವೇದಿಕೆಯಲ್ಲಿಯೇ ಉಳಿಯಲಿದ್ದಾರೆಯೇ ಅಥವಾ ಧಾರಾವಾಹಿಗಳ ಬಗ್ಗೆ ಒಲವು ವ್ಯಕ್ತಪಡಿಸುತ್ತಾರಾ?
- ಕೊನೆಯ, ಆದರೆ ಬಹುಮುಖ್ಯ ಜಿಜ್ಞಾಸೆ ಡಬ್ಬಿಂಗ್ ಕುರಿತಾದುದು. ಕಿರುತೆರೆಯಲ್ಲಿ ಡಬ್ಬಿಂಗ್ ಸಿನಿಮಾ ಹಾಗೂ ಧಾರಾವಾಹಿಗಳ ಪ್ರಸಾರಕ್ಕೆ ಲಾಕ್‌ಡೌನ್ ಸಂದರ್ಭ ಸುವರ್ಣಾವಕಾಶ ಕಲ್ಪಿಸಿದೆ. ಡಬ್ಬಿಂಗ್ ಸಿನಿಮಾಗಳಿಗೆ ನೋಡುಗರಿಂದ ಉತ್ಸಾಹದ ಪ್ರತಿಕ್ರಿಯೆಯೂ ವ್ಯಕ್ತವಾಗಿದ್ದು, ಕನ್ನಡದ ಚಲನಚಿತ್ರಗಳಿಗೆ ಹಿನ್ನಡೆಯಾಗಿದೆ ಎಂದು ಎಸ್. ವಿ. ರಾಜೇಂದ್ರಸಿಂಗ್ ಬಾಬು ಅವರಂಥ ಹಿರಿಯ ಸಿನಿಮಾ ನಿರ್ದೇಶಕರೇ ಆತಂಕ ವ್ಯಕ್ತಪಡಿಸಿದ್ದಾರೆ. ಈ ಡಬ್ಬಿಂಗ್ ಪ್ರಕ್ರಿಯೆ ಮುಂದಿನ ದಿನಗಳಲ್ಲಿ ಕನ್ನಡ ಕಿರುತೆರೆಯಲ್ಲಿನ ಈವರೆಗಿನ ಲೆಕ್ಕಾಚಾರಗಳನ್ನು ಬದಲಿಸಲಿದೆಯೇ?

ಈ ಪ್ರಶ್ನೆಗಳನ್ನು ಮುಖ್ಯವಾಗಿಟ್ಟುಕೊಂಡು ಕಿರುತೆರೆಗೆ ಸಂಬಂಧಿಸಿದ ವಿವಿಧ ಜನರನ್ನು ಮಾತನಾಡಿಸಿದಾಗ ಮುಖ್ಯವಾಗಿ ವ್ಯಕ್ತವಾದುದು ನಿರಾಶೆಯೇ. ಸುರೇಶ್ ಅವರ ಮಾತಿನಲ್ಲಿ ಹೇಳುವುದಾದರೆ, ಕಿರುತೆರೆಯ ನಾಳೆಗಳು ತುಂಬಾ